ಇದಕ್ಕೆ ಬೇಕಾದಂತಹ ಕಟ್ಟಡ, ಶೌಚ್ಯಾಗಾ, ಹಾಗೂ ಸಾಮಾಗ್ರಿಗಳು ಸೇರಿ ಪ್ರತಿ ಕೇಂದ್ರಗಳಲ್ಲೂ 5 ಲಕ್ಷ ರೂಪಾಯಿಗಳ ಅಂದಾಜು ವೆಚ್ಚಣಗಲಿದೆ, ಮತ್ತೆ ಈ ಕೇಂದ್ರಗಳಲ್ಲಿ ಕೆಲಸ ನಿರ್ವಹಿಸಲು ಸಿಬ್ಬಂದಿಗಳಿಗೆ ತರಬೇತಿ ಈಗಾಗಲೇ ಪ್ರಾರಂಭವಾಗಿದೆ ಎಂದು ಹೇಳಿದ್ದಾರೆ. ಏನು ಸ್ವಾಮಿ ಇದರ ಅರ್ಥ ಸರ್ಕಾರಕ್ಕೆ ಏನಾದರೂ ಬ್ಲತ್ತೆ ಇದೆಯೇ? ನಾವು ಎಲ್ಲರೂ ತಿಳಿದುಕೊಳ್ಳುವುದೇನೆಂದರೆ ಒಂದು ಸರ್ಕಾರ ಬದಲಾವಣೆಯಾದಾಗ ಅದರ ಪಾಲಿಸಿ, ಡಿಸಿಷನ್‌ಗಳು, ವ್ಯವಸ್ಥೆಗಳು ಮತ್ತೊಂದು ಸರ್ಕಾರಕ್ಕಿಂತ ಸ್ವಲ್ಪ ಬದಲಾವಣೆಯಾಗುವಂಥಾದ್ದು ಆಗುತ್ತದೆ. ಆದರೆ ಇಲ್ಲಿ ಒಂದೇ ಸರ್ಕಾರದಲ್ಲಿ ಒಂದೇ ವ್ಯವಸ್ಥೆಯಲ್ಲಿ ಕಳೆದ ವರ್ಷ ಇದು ಸಚಿವರು ಹೇಳಿಕೆ ಕೊಟ್ಟಿರುವಂಥಾದ್ದಕ್ಕೆ ವ್ಯತಿರಿಕ್ತವಾಗಿ ಉದ್ಭವಿಸುವುದಿಲ್ಲ, ನಾವು ಮಾಡುವುದಿಲ್ಲವೆಂದು ಹೇಳುವಂಥಾದ್ದು ಸರಿಯಲ್ಲ, ಸರ್ಕಾರದ ಬದ್ಧತೆ ಬೇಕಲ್ಲಾ ಈ ರೀತಿ ಉತ್ತರ ಕೊಟ್ಟರೆ ಹೇಗೆ ಸ್ವಾಮಿ? ಇದರ ಬಗ್ಗೆ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಸ್ಪಷ್ಟನೆ ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸದನದಲ್ಲಿ ಹಿಂದೆ ಈ ಇಲಾಖೆಯ ಸಂಬಂಧಪಟ್ಟಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ತಾವು ದಯವಿಟ್ಟು ಈ ಪ್ರಶ್ನೆಯನ್ನು ತಡೆ ಹಿಡಿದರೆ ಹಿಂದೆ ಕೊಟ್ಟರುವಂತಹ ಉತ್ತರದ ಹಿನ್ನಲೆಯನ್ನು ನಾನೆ ಮತ್ತೊಮ್ಮೆ ಪರಿಶೀಲನೆ ಮಾಡಿ ಹೇಳುತ್ತೇನೆ.

ಅಧ್ಯಕ್ಷರು : ಆಗಲಿ.

ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿ ಖಾಲಿ ಇರತಕ್ಕ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಭರ್ತಿ

25(72) ಶ್ರೀ ನಾಯ್ಕ ಜೆ.ಡಿ (ಭಟ್ಕಳ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕಿಗೆ ಮಂಜೂರಾದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ ಎಷ್ಟು?

2) ಎಷ್ಟು ಹುದ್ದೆಗಳು ಖಾಲಿ ಇವೆ?

3) ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿ ಸಾಕಷ್ಟು ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಖಾಲಿ ಇದ್ದುದರಿಂದ ಹಲವು ಶಾಲೆಗಳು ತೆರೆಯಲಾದ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದಿಯೆ?

4) ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ಎಂದು ತುಂಬಲಾಗುವುದು?

ಪೊ|| ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು)

1) ಮಂಜೂರಾದ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಭಟ್ಕಳ ತಾಲ್ಲೂಕಿನಲ್ಲಿ ಹೊನ್ನಾವರ ತಾಲ್ಲೂಕಿನಲ್ಲಿ

	ಮಂಜೂರಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು	ಮಂಜೂರಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
1. ಪದವೀಧರೇತರ ಮುಖ್ಯ ಶಿಕ್ಷಕರು	11	2	20	4
2 ಬಡ್ತಿ ಮುಖ್ಯ ಶಿಕ್ಷಕರು	60	60	30	7
3 ಸಹಶಿಕ್ಷಕರು	832	78	574	68
4 ಬಾಲವಾಡಿ ನರ್ಸರಿ	13	-	10	
ಒಟ್ಟು	916	100	624	79
2. 100			79	

3. ಬಂದಿದೆ. ಪ್ರಸ್ತುತ 2001-02 ನೇ ಸಾಲಿನ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಈ ತಾಲ್ಲೂಕುಗಳಲ್ಲಿ ಸಹ ಖಾಲಿ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಈ ಆಯ್ಕೆಪಟ್ಟಿಗೆ ನ್ಯಾಯಮಂಡಳಿಯಿಂದ ತಡೆಯಾಜ್ಞೆಯಿದ್ದು ತೆರವು ಆದ ನಂತರ ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕ ಮಾಡುವ ಮೂಲಕ ಖಾಲಿಯಿರುವ ಈ ಹುದ್ದೆಗಳನ್ನು ತುಂಬಲಾಗುವುದು. ಈ ಮಧ್ಯೆ ವಿದ್ಯಾರ್ಥಿಗಳ ಪಾಠ

4. ಪ್ರವಚನಗಳಿಗೆ ತೊಂದರೆಯಾಗದ ರೀತಿ ತಾತ್ಕಾಲಿಕವಾಗಿ ನಿಯೋಚನೆ ಮೂಲಕ ಶಿಕ್ಷಕರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಜೆ.ಡಿ. ನಾಯಕ್ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದ ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿ 16 ಗ್ರಾಮ ಪಂಚಾಯತ್‌ಗಳು ಬರುತ್ತವೆ. ಇದರಲ್ಲಿ ಒಟ್ಟು ಮಂಜೂರಾದ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು? ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಉತ್ತರವಾಗಿ ಭಟ್ಕಳ ತಾಲ್ಲೂಕಿನಲ್ಲಿ 916 ಹುದ್ದೆಗಳು, ಹೊನ್ನಾವರ ತಾಲ್ಲೂಕಿನಲ್ಲಿ 624 ಹುದ್ದೆಗಳು ಮಂಜೂರಾಗಿವೆ ಎಂದು ಹೇಳಿದ್ದಾರೆ. ಇನ್ನು ಖಾಲಿ ಇರುವಂತಹ ಹುದ್ದೆಗಳು ಭಟ್ಕಳದಲ್ಲಿ 100, ಹೊನ್ನಾವರ ತಾಲ್ಲೂಕಿನಲ್ಲಿ 79 ಹುದ್ದೆಗಳು ಎಂದು ಹೇಳಿದ್ದಾರೆ. ಹಾಲಿ ಇರುವ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದರಿಂದ ಹೆಚ್ಚಿನ ಶಾಲೆಗಳಲ್ಲಿ ಕಾರ್ಯ ನಿರ್ವಹಿಸಲು ಆಗದೇ ಮಕ್ಕಳಿಗೆ ತೊಂದರೆಯಾಗಿದೆ, ಮತ್ತೆ ಶಾಲೆಗಳನ್ನು ಬೀಗ ಹಾಕುವಂತಹ ಪರಿಸ್ಥಿತಿಯಾಗಿದೆ. ಆದುದರಿಂದ ಈ ಹುದ್ದೆಗಳನ್ನು ಅದಷ್ಟು ಬೇಗ ಭರ್ತಿ ಮಾಡಬೇಕೆಂದು ಮಾನ್ಯ ಮಂತ್ರಿಯವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಪ್ರೊ. ಬಿ.ಕೆ. ಚಂದ್ರಶೇಖರ್ : ಮಾನ್ಯ ಅಧ್ಯಕ್ಷರೆ, ನಾವು ಖಂಡಿತವಾಗಿ ಇದನ್ನು ಮಾಡೋಣ, ಈಗಾಗಲೇ ಈ ಪ್ರಕ್ರಿಯೆಯಲ್ಲಿದ್ದೇವೆ, ಇದಕ್ಕೆ ಕೆ.ಎ.ಟಿ.ಯಿಂದ ಏನು ಸ್ಟೇ ಇತ್ತು,

ಅದನ್ನು ತೆಗೆಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಿಯಾಗಿದೆ, ಮತ್ತೆ ಅಡ್ವೊಕೇಟ್ ಜನರಲ್‌ರವರ ಜೊತೆಯಲ್ಲೂ ಸಹ ಚರ್ಚೆ ಮಾಡಿಯಾಗಿದೆ. ಇದು ಸಧ್ಯದಲ್ಲೇ ಆಗುತ್ತದೆ, ಇದನ್ನು ಖಂಡಿತವಾಗಿ ಮಾಡೋಣ.

ಶ್ರೀ ಜೆ.ಡಿ. ನಾಯಕ್ : ಮಾನ್ಯ ಅಧ್ಯಕ್ಷರೆ, ಈಗ ಹೊಸದಾಗಿ ಏನು ನೇಮಕಾತಿಯನ್ನು ಮಾಡಿದ್ದಾರೆ, ಅದಕ್ಕೆ ನ್ಯಾಯಲಯದಿಂದ ಸ್ಟೇ ಇದೆಯೆಂದು ಹೇಳಿದ್ದಾರೆ. ಈಗ ಬೇರೆ ಬೇರೆ ಜಿಲ್ಲೆಗಳಿಂದ ಶಿಕ್ಷಕರು ವರ್ಗಾವಣೆಯನ್ನು ತೆಗೆದುಕೊಂಡು ಸರ್ಕಾರದಿಂದ ಆದೇಶವನ್ನು ತೆಗೆದುಕೊಂಡು ಹೋಗಿದ್ದಾರೆ, ಇದು ಡಿಡಿಪಿಐ ಕಚೇರಿಯಲ್ಲೇ ಪೆಂಡಿಂಗ್ ಇದೆ. ಇದಕ್ಕೆ ಸರ್ಕಾರ ಆದೇಶವನ್ನು ಕೊಟ್ಟರೆ ಸಾಕಷ್ಟು ಜನರು ಭಟ್ಕಳಕ್ಕೆ, ಹೊನ್ನಾವರಕ್ಕೆ ಬರಲು ತಯಾರಿದ್ದಾರೆ. ಮಾನ್ಯ ಮಂತ್ರಿಯವರು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರೊ ಬಿ.ಕೆ. ಚಂದ್ರಶೇಖರ್ : ಮಾನ್ಯ ಅಧ್ಯಕ್ಷರೆ, ಆ ರೀತಿ ಶಿಕ್ಷಕರು ಭಟ್ಕಳಕ್ಕೆ, ಹೊನ್ನಾವರಕ್ಕೆ ಬರಲು ತಯಾರಿದ್ದರೆ ಮಾಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಕೆಎಟಿಯಲ್ಲಿ ಕೇಸ್‌ಪೆಂಡಿಂಗ್ ಇದೆ, ಇದು ಬೇಗ ಇತ್ಯರ್ಥವಾಗುವ ಹಾಗೆ ಆದರೆ ಈಗ ಹೊಸದಾಗಿ ಅಧ್ಯಾಪಕರ ನೇಮಕಾತಿಯಾಗುವಂತಹ ಕೆಲಸವೂ ಆಗುವಂತೆ ಆಗುತ್ತದೆ. ಆದರೆ ಕೆಎಟಿಯಲ್ಲಿ ಇದು ಸ್ಟೇ ಆಗಿದೆ, ಇದರಿಂದಾಗಿ ಇನ್ನು ವಿಳಂಬವಾಗಿ ಮುಂದುವರೆಯುತ್ತಲೇ ಇದೆ. ಈ ಹೊಸ ನೇಮಕಾತಿಯಾಗುವಂಥಾದ್ದು 15,500 ಅಧ್ಯಾಪಕರ ಪ್ರಶ್ನೆಯಾಗಿದೆ. ಆದುದರಿಂದ ಕೆಎಟಿಯ ಮುಂದಿರುವ ಈ ಕೇಸ್‌ನ್ನು ಸರ್ಕಾರ ಅದಷ್ಟುಬೇಗ ಇತ್ಯರ್ಥ ಮಾಡಿದರೆ ಒಳ್ಳೆಯದು, ಈಗಾಗಲೇ ಶಾಲೆಗಳು ಪ್ರಾರಂಭವಾಗಿ ತಿಂಗಳುಗಟ್ಟಲೆ ಆಗಿದೆ, ಮಕ್ಕಳಿಗೂ, ಅಧ್ಯಾಪಕರುಗಳಿಗೂ ತೊಂದರೆಯಾಗಿದೆ.

ಅಧ್ಯಕ್ಷರು : ಮಾನ್ಯ ಮಂತ್ರಿಯವರೇ, ಈಗ ಕೆಎಟಿಯಲ್ಲಿರುವಂತಹ ಕೇಸ್ ಅನ್ನು ಬೇಗ ಡಿಸ್‌ಪೋಸ್ ಮಾಡುವಂಥಾದ್ದಕ್ಕೆ ಪ್ರಯತ್ನ ಮಾಡಿ.

ಪ್ರೊ.ಬಿ.ಕೆ. ಚಂದ್ರಶೇಖರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವುದಕ್ಕೆ ನಾನು ಹೇಳುತ್ತೇನೆ, ಸರ್ಕಾರ ತನ್ನ ಎಲ್ಲಾ ಜವಾಬ್ದಾರಿಗಳನ್ನು ಮುಗಿಸಿದೆ, ವಾದ ಎಲ್ಲಾ ಆಗಿದೆ, ಆರ್ಡರ್ ರಿಸರ್ವ್ ಮಾಡಿದ್ದಾರೆ. ಇದನ್ನು ಬೇಗ ಆರ್ಡರ್ ಮಾಡಬೇಕೆಂಬ ಬಗ್ಗೆ ಅಡ್ವೋಕೇಟ್ ಜನರಲ್ ಮನವಿ ಮಾಡಿದ್ದಾರೆ. ನಮ್ಮ ಸರ್ಕಾರದ ವತಿಯಿಂದ ಏನೂ ತೊಂದರೆ ಇಲ್ಲ, ಇದನ್ನು ಅದಷ್ಟು ಬೇಗ ಮಾಡಿಸಿ ಕೊಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಹೊಸದಾಗಿ ಈ ಖಾತೆಯನ್ನು ತೆಗೆದುಕೊಂಡಿದ್ದಾರೆ, ಅವರಿಗೆ ನನ್ನ ಒಂದು ಸಲಹೆ ಏನೆಂದರೆ ನಾನು ಗಮನ ಸೆಳೆಯುವ ಸೂಚನೆಯಡಿಯಲ್ಲಿ ಈ ರಾಜ್ಯದಲ್ಲಿರುವಂತಹ ವಿವಿಧ ಪ್ರಾಥಮಿಕ ಶಾಲೆಗಳಲ್ಲಿರುವಂತಹ ವೆಕೆನ್ಸಿಗಳು ಮತ್ತು ಈ ಶಾಲೆಗಳಲ್ಲಿರುವಂತಹ ತೊಂದರೆಗಳು, ಈ 15 ಸಾವಿರ ಜನ ಉಪಧ್ಯಾಯರ ನೇಮಕಾತಿಯ ಬಗ್ಗೆ, ಹಾಗೂ ಇವರು ಬೇರೆ ಇಲಾಖೆಗಳಿಗೂ ಕೆಲಸಕ್ಕೆ ಹೋಗದೆ ಜಾತಕಪಕ್ಷಿಗಳಂತೆ

ಕಾದುಕೊಂಡಿರುವ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾಡೋಣ. ಮುಂದಿನ ಪ್ರಶ್ನೆ

ಮಂಡ್ಯ ಚೀರನಹಳ್ಳಿ ತಗ್ಗಹಳ್ಳಿ ಸಬ್ಬನಹಳ್ಳಿ ರಸ್ತೆಗಳನ್ನು ದುರಸ್ತಿಗೊಳಿಸುವುದು

26(123) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಮಂಡ್ಯ-ಚೀರನಹಳ್ಳಿ-ತಗ್ಗಹಳ್ಳಿ-ಸಬ್ಬವಹಳ್ಳಿ ರಸ್ತೆಯು ಮಂಡ್ಯ ಜಿಲ್ಲಾ ಪಂಚಾಯ್ತಿಯ ವ್ಯಾಪ್ತಿಗೆ ಒಳಪಡುತ್ತದೆಯೇ;

2) ಈ ರಸ್ತೆಯು ತೀರ ಹದಗೆಟ್ಟಿದ್ದು ಸಂಚಾರಕ್ಕೆ ಯೋಗ್ಯವಾಗಿಲ್ಲದೆ ಇರುವುದನ್ನು ಸರಕಾರವು ಮನಗಂಡಿದೆಯೇ;

3) ಹಾಗಿದ್ದಲ್ಲಿ, ಈ ರಸ್ತೆಯನ್ನು ದುರಸ್ತಿ ಪಡಿಸಿ ತುರ್ತು ಅಭಿವೃದ್ಧಿ ಮಾಡಲು ಸರಕಾರವು ಕ್ರಮವನ್ನೇನಾದರೂ ಕೈಗೊಂಡಿದೆಯೇ;

4) ಕೈಗೊಂಡಿದ್ದಲ್ಲಿ, ಅದರ ವಿವರಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) ಹೌದು

2) ಕೆಲವು ಆಯ್ಕೆ ಭಾಗಗಳಲ್ಲಿ ರಸ್ತೆ ಹದಗೆಟ್ಟಿರುವುದು ಸರ್ಕಾರವು ಮನಗಂಡಿದೆ.

3) ಹೌದು

4) ಹೌದು ಈ ರಸ್ತೆಯು ಬರುವ ಒಂದು ಸೇತುವೆಯನ್ನು ರೂ.10.00 ಲಕ್ಷಗಳಲ್ಲಿ ಸರ್ಕಾರದ ಅನುದಾನದಲ್ಲಿ ಹಾಲಿ ವರ್ಷ ಕೈಗೊಳ್ಳಲಾಗುವುದು ಮತ್ತೊಂದು ಸೇತುವೆ ರೂ.7.00 ಲಕ್ಷಗಳಲ್ಲಿ ಈಗಾಗಲೇ ಕೈಗೊಂಡಿದ್ದು, ಪ್ರಗತಿಯಲ್ಲಿದೆ. ಮತ್ತು ರಸ್ತೆ ಅಭಿವೃದ್ಧಿಗಾಗಿ 1.75 ಕಿಮೀ ಉದ್ದದ ರಸ್ತೆಯನ್ನು ರೂ. 27.50 ಲಕ್ಷಗಳು ನಬಾರ್ಡ್ ಯೋಜನೆಯಡಿಯಲ್ಲಿ ಮತ್ತು ರೂ. 35.00 ಲಕ್ಷಗಳ ಅಂದಾಜು ವೆಚ್ಚದಲ್ಲಿ 2.45 ಕಿಮೀ ಉದ್ದದ ರಸ್ತೆಯನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಅನುಮೋದನೆಗೊಂಡಿದ್ದು ಕಾರ್ಯರೂಪಗೊಳಿಸಲಾಗುವುದು.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೆ, ಮಂಡ್ಯ ಮತ್ತು ಮಳವಳ್ಳಿ ಸಂಪರ್ಕಿಸುವಂತಹ ರಸ್ತೆ ಕೃಷಿ ಉತ್ಪನ್ನಗಳನ್ನು ಸಾಗಿಸುವಂತಹ ಪ್ರಮುಖವಾದ ರಸ್ತೆಯಾಗಿದ್ದು, ಇದು ಹದಗಟ್ಟಿರುವಂಥಾದ್ದು ಸರ್ಕಾರವು ಮನಗಂಡಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಹಾಗೆ ಜಿಲ್ಲಾ ಪಂಚಾಯತ್, ಗ್ರಾಮ ಸಡಕ್ ಯೋಜನೆ, ಮತ್ತು ನಬಾರ್ಡ್ ಯೋಜನೆಯಡಿಯಲ್ಲಿ 72ಲಕ್ಷ ರೂಪಾಯಿಗಳ ದುರಸ್ತಿ ಕಾಮಗಾರಿಯನ್ನು ತೆಗೆದುಕೊಳ್ಳಲಾಗುತ್ತದೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಈ ದುರಸ್ತಿ ಕಾರ್ಯ ಕೇವಲ ಕಾಗದದಲ್ಲಿ ಮಾತ್ರ ಉಳಿದಿದೆಯೇ, ಹೊರತು